ಶ್ರೀ ಎಂ. ಬಿ. ರಾಮಸ್ವಾಮಿ.—ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ನಲ್ಲಿರತಕ್ಕ ಕೆಲವೇ ಜನ ಶ್ರೀಮಂತರು ಹೆಚ್ಚಾಗಿ ಇವಕ್ಕೆ ಅಪ್ಲೈತಿ ಮಾಡುವುದರಿಂದ ಎರ್ನಾ ಬಡಜನರಿಗೆ ಇವು ಉಪಯೋಗವಾಗಲಿಕ್ಕೆ ಅಡ್ಡಿಯಾಗಿದೆ. ಆದ್ದರಿಂದ ಬಡಜನಗಳೂ ಸಹ ಇವುಗಳ ಉಪಯೋಗ ಪಡೆಯುವ ವ್ಯವಸ್ಥೆಯನ್ನು ಮಾಡಲಾಗುತ್ತದೆಂದು ಆಶ್ವಾಸನೆ ಕೊಡುವಿರಾ?

ಶ್ರೀ ಕೆ. ಎಚ್. ಪಾಟೀಲ್.—ರೈತರು ಯಾರು ಇದ್ದಾರೆಯೋ ಅವರೆಲ್ಲರೂ ಅದರಿಂದ ಉಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಕೋಲಾರ ತಾಲ್ಲೂಕಿನಲ್ಲಿ ರಾಗಿ ಬೆಳೆಗೆ ರೋಗ ತಗಲಿ ನಷ್ಟವಾಗಿದೆ ಇದರ ಬಗ್ಗೆ ತಮಗೂ ಪತ್ರ ಬರೆದಿದ್ದೇನೆ. ಡೈರೆಕ್ಟರ್ ಅವರಿಗೂ ಪತ್ರ ಬರೆದಿದ್ದೇನೆ. ಆದರೂ ಇದುವರೆಗೆ ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಕಾರಣವೇನು?

ಶ್ರೀ ಕೆ. ಎಚ್. ಪಾಟೀಲ್.—ತಮ್ಮ ಪತ್ರದ ಬಗ್ಗೆ ಈಗಾಗಲೇ ತನಿಖೆ ನಡೆದಿದೆ. ತಾವು ಈಗಾಗಲೇ ಉತ್ತರವನ್ನು ಸ್ವೀಕರಿಸಿರಬಹುದು. ತನಿಖೆ ಪೂರ್ತಿಯಾದ ನಂತರ, ಯಾವ ಕ್ರಮ ಸೂಕ್ತವೋ ಅದನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಸಿ. ಬೈರೇಗೌಡ.—ಸುಘಾರು 10 ಸಾವಿರ ಎಕರೆ ಜಮೀನಿನಲ್ಲಿ ಬೆಳೆದ ಬೆಳೆ ನಷ್ಟವಾಗಿದೆಯೆಂದೂ ಹೇಳಿದ್ದರೂ, ಇದುವರೆಗೆ ಏಕೆ ಕ್ರಮ ತೆಗೆದುಕೊಳ್ಳಲಿಲ್ಲ?

ಶ್ರೀ ಕೆ. ಎಚ್. ಪಾಟೀಲ್.—ತಾವು ಪತ್ರ ಬರೆದಿರುವುದನ್ನು ನೋಡಿದರೆ, ಹಿಂದೆ ಅಗಿರತಕ್ಕ ನಷ್ಟ. ಅದನ್ನು ಈಗ ತಿದ್ದಲಿಕ್ಕೆ ಸಾಧ್ಯವಾಗುವುದಿಲ್ಲ. ಮುಂದೆ ಆ ರೀತಿ ನಷ್ಟವಾಗಬಾರದೆಂಬ ದೃಷ್ಟಿಯಿಂದ ಮುಂಜಾಗರೂಕತೆಯ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಎಚ್. ಕುರಡಗಿ.—ತಮ್ಮ ಉತ್ತರದ (3)ನೇ ಖಟಂನಲ್ಲಿ ರೈತರಿಗೆ ರಿಯಾಯಿತಿ ಬೆಲೆಯಲ್ಲಿ ಸ್ಪೈಯರ್ ಮತ್ತು ಡಸ್ಟರ್‌ಗಳನ್ನು ತಾಲ್ಲೂಕ ಅಭಿವೃದ್ಧಿ ಮಂಡಲಗಳ ಮೂಲಕ ಒದಗಿಸರಾಗುತ್ತಿದೆಯೆಂದು ಹೇಳಿದ್ದೀರಿ. ಅದನ್ನು ಅರ್ಧ ಚಾರ್ಜಿನಲ್ಲಿ ಒದಗಿಸುತ್ತೀರಾ?

ಶ್ರೀ ಕೆ. ಎಚ್. ಪಾಟೀಲ್.—ಸೇಕಡ 25ರಷ್ಟು ಬೆಲೆಯನ್ನು ಸರ್ಕಾರ ಕೊಡುವುದಕ್ಕೆ ಮುಂಜೂರುಮಾಡಿದೆ. ಅದನ್ನು ಕೊಡಲಾಗುತ್ತದೆ.

INQUIRY AGAINST THE SRI NIJALINGAPPA'S MINISTRY

239. Sri KONANDUR LINGAPPA (Thirthahalli) :—

Will the Chief Minister be pleased to state :—

(a) whether the Government would inquire into the charges made against Sri S. Nijalingappa's Ministry to the Prime Minister and the President of India ;

(b) the difficulties in instituting an inquiry immediately ?

Sri D. DEVARAJ URS (Chief Minister) :—

(a) and (b) There is no necessity to probe into these charges as the then Prime Minister is said to have looked into the matter.

ಶ್ರೀ ಕೋಣಂದೂರು ಲಿಂಗಪ್ಪ.—ನನ್ನ ಪ್ರಶ್ನೆಗೆ ಉತ್ತರವಾಗಿ ಅಂದಿನ ಪ್ರಧಾನ ಮಂತ್ರಿಯವರು ಆ ಆರೋಪಣೆಗಳ ಬಗ್ಗೆ ಪರಿಶೀಲಿಸಿದ್ದಾರೆಂದು ತಿಳಿಸಿದೆ. ಅದರ ಫಲತಾಂಶವೇನೆಂದು ತಮಗೆ ತಿಳಿದು ಬಂದಿದೆ? ಪತ್ರಿಕೆಯವರು ವರದಿ ಮಾಡಿದ ಹಾಗೆಯೇ ಪರಿಶೀಲನೆ ಮಾಡಿದೆಯೇ ಅಥವಾ ತಮಗೆ ಅದರ ಬಗ್ಗೆ ಏನು ಖಚಿತವಾಗಿ ತಿಳಿದು ಬಂದಿದೆ?

†ಶ್ರೀ ಡಿ. ದೇವರಾಜ ಅರಸ್.—ಇದು ಹಿಂದೆ ಶ್ರೀಮಾನ್ ಶಾಸ್ತ್ರಿಯವರಿದ್ದಾಗ ಆದ ವಿಚಾರ. ನನಗೆ ಗೊತ್ತಿರುವ ಪ್ರಕಾರ, ಅವನ್ನು ಅವರು ನೋಡಿ ಕೈಬಿಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಅವನ್ನೆಲ್ಲಾ ಪರಿಶೀಲಿಸಲಾಗಿದೆಯೆಂದು ಹೇಳಿದ್ದೀರಿ. ಆದರೆ ಅವರ ಮೇಲೆ ಯಾವ್ಯಾವ ಅಪಾದನೆಗಳನ್ನು ಮಾಡಲಾಗಿತ್ತು? ಆ ಎಲ್ಲ ಆಪಾದನೆಗಳನ್ನು ಪುನಃ ರುಜುವಾತು ಮಾಡುವುದಕ್ಕೆ ಸಾಧ್ಯವಿದ್ದರೆ, ಏಕೆ ಅವುಗಳನ್ನು ಪುನಃ ಪರಿಶೀಲನೆಮಾಡಿ ಮತ್ತೆ ವಿಚಾರಣೆಗೆ ಗುರಿಪಡಿಸಬಾರದು?

ಶ್ರೀ ಡಿ. ದೇವರಾಜ್ ಅರಸ್.—ಹಿಂದೆ ಒಂದು ಸಾರಿ ಆಪಾದನೆಗಳು ಯಾವುವು ಎಂಬ ಬಗ್ಗೆ ಪತ್ರಿಕೆಗಳಲ್ಲಿ ಬಂದಿದ್ದಾಯಿತು. ಈಗ ಮತ್ತೆ ನಾನು ಅವನ್ನೆಲ್ಲಾ ಕೊಡಬೇಕೆಂದರೆ ಆದಕ್ಕೆ ನನ್ನ ಅಭ್ಯಂತರವಿಲ್ಲ. ಅದು 1964—65ರಲ್ಲಿ ಆದ ವಿಚಾರ. ಅದನ್ನು ಈಗ ನಾವು ಪುನಃ ತೆಗೆದು ಕೊಂಡು ಕೇಂದ್ರಸರ್ಕಾರಕ್ಕೆ ಹೋಗುವುದು ಸರಿಯಲ್ಲ. ಅಂತ್ಯವಾಗಿ ಅವುಗಳ ಬಗ್ಗೆ ಅಲ್ಲಯೇ ಕೈಬಿಡಬೇಕೆಂದು ಮಾಡಿದ ಮೇಲೆ ಮತ್ತೆ ಅದನ್ನು ತೆಗೆದುಕೊಳ್ಳತಕ್ಕ ಅಗತ್ಯವಿಲ್ಲ. ಅವನ್ನೆಲ್ಲಾ ಪುನಃ ಈಗ ತೆಗೆದುಕೊಳ್ಳಬೇಕೆಂದು ನನ್ನ ಮನಸ್ಸಿನಲ್ಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅಂದಿನ ಪ್ರಧಾನಮಂತ್ರಿ ಮಾನ್ಯ ಶ್ರೀ ಶಾಸ್ತ್ರಿಗಳು ಇದ್ದಾಗ ಕೇಂದ್ರ ಸರ್ಕಾರದವರು ಅವನ್ನೆಲ್ಲಾ ಪರಿಶೀಲನೆಮಾಡಿದ್ದಾರೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಅದರೆ ಮಾನ್ಯ ಶ್ರೀ ಸಿದ್ದವೀರಪ್ಪನವರು ಹಿಂದೆ ಈ ಕಡೆ ಕೂತಿದ್ದಾಗ, ನಾವು ಆ ಕಡೆ ಬಂದಾಗ ಇದರ ಬಗ್ಗೆ ವಿಚಾರಣೆ ಮಾಡುತ್ತೇವೆಂದು ಇದೇ ಸಭೆಯಲ್ಲಿಯೇ ಆಶ್ವಾಸನೆ ಮಾಡಿದ್ದರು. ಅಂದ ಮೇಲೆ ಈಗ ಅವುಗಳ ಬಗ್ಗೆ ವಿಚಾರಣೆ ಮಾಡುವುದಕ್ಕೆ ಸರ್ಕಾರ ಸಿದ್ಧವಿದೆಯೇ?

ಶ್ರೀ ಡಿ. ದೇವರಾಜ್ ಅರಸ್.—ಮಾನ್ಯ ಶ್ರೀ ದೇವೇಗೌಡರು ಹೇಳುವುದರಲ್ಲಿ ನಾನು ಏನು ಅರ್ಥಮಾಡುತ್ತೇನೆಂದರೆ, ನೀವೆಲ್ಲರೂ ಈ ಸಭೆಯಲ್ಲಿ ಅವನ್ನು ಮತ್ತೊಂದು ಸಾರಿ ವಿಚಾರಣೆ ಮಾಡಲೇಬೇಕೆಂದು ಕೇಳುವುದಾದರೆ, ಅದಕ್ಕೆ ನನ್ನ ಆಭ್ಯಂತರವೇನೂ ಇಲ್ಲ. ನನ್ನ ಅಭಿಪ್ರಾಯದ ಪ್ರಕಾರ, ಹಿಂದೆ ಆದುದನ್ನು ಮತ್ತೆ ಈಗ ವಿಚಾರಮಾಡುವ ಅಗತ್ಯವಿಲ್ಲ. ಅವರು ಆ ರೀತಿ ಹಿಂದೆ ಅಲ್ಲದ್ದಾಗ ಹೇಳಿರಬಹುದು. ಹಿಂದೆ ಒಂದು ಸಾರಿ ಅದರ ಬಗ್ಗೆ ಅಲ್ಲಿ ವಿಚಾರಣೆಯಾಯಿತೆಂದು ಹೇಳಿದಮೇಲೆ ಪುನಃ ಪುನಃ ಅದನ್ನೇ ಕೆದಕಿಕೊಂಡು ಹೋಗುವುದು ಅಷ್ಟು ಉಚಿತವಲ್ಲವೆಂದು ನನಗನ್ನಿಸುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅಂದಿನ ಪ್ರಧಾನಮಂತ್ರಿಗಳು ಅವನ್ನು ಪರಿಶೀಲಿಸಿದ್ದಾರೆಂದು ಉತ್ತರದಲ್ಲಿ ಹೇಳಿದ್ದೀರಿ. ಆದರೆ ಅವರು ಅವರ ಬಗ್ಗೆ ಅಖೈರಾಗಿ ತೀರ್ಮಾನ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಅಖೈರು ತೀರ್ಮಾನ ಅವರು ಅದರ ಬಗ್ಗೆ ಕೊಟ್ಟಿದ್ದರೆ ಅದನ್ನು ಸ್ಪಷ್ಟವಾಗಿ ಈ ಸಭೆಗೆ ತಿಳಿಸಬೇಕು. ಆ ರೀತಿಯಾಗಿ ಇನ್ನೂ ಅಖೈರು ತೀರ್ಮಾನವನ್ನು ಅವರು ಕೊಡದಿದ್ದರೆ, ತಾವಾದರೂ ಈಗ ಒಂದು ತೀರ್ಮಾನ ತೆಗೆದುಕೊಂಡು ವಿಚಾರಣೆ ಮಾಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್.—ಅಖೈರು ತೀರ್ಮಾನವೋ, ಏನೋ, ಅಂತೂ ಅವರು ಅವನ್ನೆಲ್ಲಾ ನೋಡಿದ್ದಾರೆ, ಕೈಬಿಟ್ಟಿದ್ದಾರೆ. ನೋಡಿದರು, ಬಿಟ್ಟರು. ಯಾವ ರೀತಿ ಕೈಬಿಟ್ಟಿದ್ದಾರೆ, ಏನು ಎಂಬುದನ್ನು ನೋಡುವುದಕ್ಕೆ ನಾನು ಹೋಗಿಲ್ಲ. ನನ್ನ ಅಭಿಪ್ರಾಯದಲ್ಲಿ ಮತ್ತೆ ಪುನಃ ಪುನಃ ಆ ವಿಷಯಗಳ ಬಗ್ಗೆ ಏನಾಗಿದೆಯೆಂಬುದನ್ನು ನೋಡುವುದಕ್ಕೆ ಹೋಗುವ ಅಗತ್ಯವಿಲ್ಲ. ಸರ್ಕಾರದ ಅಭಿಪ್ರಾಯವೂ ಕೂಡ ಅದೇ ಆಗಿದೆ.

1-30 P.M.

ಶ್ರೀ ಕೆ. ಎಂ. ನಾಗಣ್ಣ.—ಈ ಆಪಾದನೆ ಪಟ್ಟಿಯನ್ನು ಕೇಂದ್ರಸರ್ಕಾರಕ್ಕೆ ನದನ್ಯರು ಕಳಿಸಿದ್ದಾರೆಂದು ಅರ್ಥವಾಗುತ್ತದೆಯೇ ಏನಹ ಬೇರೇನೂ ಅಲ್ಲ. ಆದರೆ, ಅದನ್ನು ಈ ಸಭೆಗೆ ಕಳಿಸಿಲ್ಲ. ಕೇಂದ್ರಸರ್ಕಾರವು ಅದನ್ನು ನೋಡಿಯೋ, ನೋಡದೆಯೋ ಕೈಬಿಟ್ಟಿರಬೇಕಾದರೆ ಅದು ಈಸಭೆಯಲ್ಲಿ ಚರ್ಚೆ ಮಾಡದೆ ಏನಾದರೂ ತೀರ್ಮಾನ ಮಾಡಲು ಸರ್ಕಾರಕ್ಕೆ ಯಾವುದಾದರೂ ಅಧಿಕಾರ ಉಂಟೆ?

ಶ್ರೀ ಡಿ. ದೇವರಾಜ್ ಅರಸ್.—ಅದನ್ನು ನಾವು ಚರ್ಚೆ ಮಾಡುವುದಕ್ಕೂ ಹೋಗುವುದಿಲ್ಲ; ಮತ್ತು ನೋಡುವುದಕ್ಕೂ ಇಷ್ಟಪಡುವುದಿಲ್ಲ.

Sri B. B. SAYANAK.—May I know since Sri Devaraj Urs was one of the Ministers in Sri Nijalingappa's Ministry he is not going to enquire into this matter?

Sri D. DEVARAJ URS.—This is really a very fine question. ನನ್ನ ಮಟ್ಟಿಗೆ ಬೇಕಾದರೆ ವಿಚಾರಣೆ ಮಾಡಿಸಲು ನಾನು ತಯಾರಾಗಿದ್ದೇನೆ. ನನ್ನ ಹೇಳಿಕೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು. ನನ್ನ ಮಟ್ಟಿಗೆ ಯಾವ ಅಪಾದನೆಗಳು ಇವೆಯೋ, ಅವುಗಳ ಬಗ್ಗೆ ಈ ಸಭೆ ಯಾವರೀತಿ ವಿಚಾರಣೆಮಾಡಿ ಎಂದು ಹೇಳುತ್ತಪೆ ಅದಕ್ಕೆ ನಾನು ತಯಾರಾಗಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಅಪಾದನೆ ಮಾಡಿರತಕ್ಕಂಥವುಗಳನ್ನು ವಿಚಾರಣೆ ಮಾಡದೆ ಕೇವಲ ಇದರ ಮೇರೆ ಒಂದು ರಾಜಕೀಯ ತೀರ್ಮಾನವನ್ನು ಮಾಡಿದ್ದಾರೆ. ಆದರೆ ಇದರಲ್ಲಿ ನ್ಯಾಯಾಂಗ ವಿಚಾರಣೆ ನಡೆಸಿ ? ಅದು ತೀರ್ಮಾನಕ್ಕೆ ಬಂದಿಲ್ಲ. ಆದ್ದರಿಂದ ಹಿಂದೆ ಮಾಡಿರ ತಕ್ಕಂತಹ ಅಪಾದನೆಗಳ ಬಗ್ಗೆ ಒಂದು ನ್ಯಾಯಾಂಗ ವಿಚಾರಣೆ ನಡೆಸಿ ಯಾರು ತಪ್ಪಿತಸ್ಥರು ಎಂದು ಕಂಡುಹಿಡಿಯುವುದಕ್ಕೆ ಸಹಕರಿಸುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಒಬ್ಬ ಮಾನ್ಯ ಸದಸ್ಯರು ನನ್ನ ಹೆಸರು ಹೇಳಿರುವುದರಿಂದ ನಾನು ಹಾಗೆ ಹೇಳಿದೆ; ಅಷ್ಟೆ. ಬಾಕಿಯವರ ಬಗ್ಗೆ ಜುಡಿಶಿಯರ್ ಎನ್‌ಕ್ವಾಯರಿ ಮಾಡುವುದರ ಬಗ್ಗೆ I still feel the Government has no intention to go into these questions. ನಾನು ಈ ಬಗ್ಗೆ ಏನು ಹೇಳುವುದೆಂದರೆ, ತಾವು ಇನ್ನೊಂದು ಸಾರಿ ಅವಕಾಶ ಕೊಡಿ; ನಾನು ಬರೆದಿರತಕ್ಕಂತಹ ಕಾಗದ ಪತ್ರಗಳನ್ನೆಲ್ಲಾ ಇಲ್ಲಿ ತಂದು ಇಟ್ಟುಬಿಡುತ್ತೇನೆ. ಮಾನ್ಯ ಸದಸ್ಯರು ಆಗಿನ ಮಂತ್ರಿಮಂಡಲದಲ್ಲಿ ನಾನೂ ಇದ್ದೆ ಎಂಬ ಮಾತು ಹೇಳಿರುವುದರಿಂದ ಇದರ ಬಗ್ಗೆ ನಿಜಲಿಂಗಪ್ಪನವರಿಗೆ ಏನು ಪತ್ರಗಳನ್ನು ಬರೆದಿದ್ದೇನೆ ಎಂಬುದನ್ನು ಸಭೆಯ ಮುಂದಿಡಲು ತಯಾರಿದ್ದೇನೆ. ಅದನ್ನು ನಾನು ಇನ್ನೂ ಪಬ್ಲಿಷ್ ಮಾಡಿಲ್ಲ. ಅದನ್ನು ಮಾಡಲೇಬೇಕೆಂದು ಹೇಳಿದರೆ ಮಾಡಬಹುದು. ಆದ್ದರಿಂದ ಈ ಸಭೆ ಯಾವ ರೀತಿ ಅದರ ಮೇಲೆ ಹೇಳುತ್ತದೆ, ಅದಕ್ಕೆ ನಾನು ಬದ್ಧನಾಗಿರುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನಾನು ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ ಆ ಪತ್ರಗಳನ್ನು ದಯವಿಟ್ಟು ಸಭೆಯ ಮುಂದೆ ಇಡಬೇಕು; ಅದನ್ನು ಯಾವಾಗ ಇಡುತ್ತೀರೆಂದು, ಹೇಳಬೇಕು. ಆ ನಂತರ ಆಪುಗಳನ್ನು ಪರಿಶೀಲನೆ ಮಾಡಬಹುದು.

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—(ಎದ್ದುನಿಂತು ಏನೋ ಹೇಳುವುದಕ್ಕೆ ಪ್ರಯತ್ನಪಟ್ಟರು). (ಶ್ರೀಯುತರುಗಳಾದ ಜಿ. ಬಿ. ಸಮನಿಕ್, ಎಸ್. ಬಂಗಾರಪ್ಪ, ಕೋಣಂದೂರು ಲಿಂಗಪ್ಪ, ಮುಂತಾದವರು ಅದನ್ನು ಪ್ರತಿಭಟಿಸಿದರು).

Sri C. M. ARUMUGAM.—It is difficult for us to functioon in this House.

Madam SPEAKER.—It is very difficult for me but not to the Hon'ble Member. Is this correct on the Hon'ble Member's part to behave like this ?

ಮಾನ್ಯ ಮುಖ್ಯಮಂತ್ರಿಯವರು, "ನೀವು ಇನ್ನೊಂದು ಸಾರಿ ನನಗೆ ಅವಕಾಶ ಕೊಟ್ಟರೆ ನಾನು ಆ ಕಾಗದಪತ್ರಗಳನ್ನು ಇಲ್ಲಿ ಇಡುತ್ತೇನೆ," ಎಂದು ಹೇಳಿದರು. ಆದ್ದರಿಂದ ಇನ್ನೊಂದು ಸಾರಿ ನಾನು ಅದಕ್ಕೆ ಅವಕಾಶ ಕೊಟ್ಟರೆ ಅದು ಬರುತ್ತದೆಯೇ ಹೊರತು ಇಲ್ಲದಿದ್ದರೆ ಆ ಪ್ರಶ್ನೆ ಬರುವುದಿಲ್ಲ. ಆದ್ದರಿಂದ ಅದಕ್ಕೋಸ್ಕರ ಎಲ್ಲರೂ ನಿಂತುಕೊಂಡು ಮಾತಾಡಿದರೆ ಹೇಗೆ ?

Sri C. M. ARUMUGAM.—We are seeking the protection of the Speaker. Sri K. H. Patil has been unnecessarily interfering in the debate and causing unnecessarily delay in attending to the business of the House. He should think that he should not do so. He should not think that he himself is the Government. But he is only a part of Government. I submit that the Chief Minister is sufficiently strong and sufficiently ready to protect himself. He does not require anybodys help or advice or guidance. Therefore, Sri K. H. Patil's help is not at all required by the Chief Minister. Sri K. H. Patil is threatening the opposition member by saying that we the

Opposition members are threatening the Government. If he threatens us we will retort, otherwise we do nothing and simply co-operate with them. We want your protection in this connection because they are the Government. He must behave as a Minister. He should withdraw what he said now.

Madam SPEAKER.—All should behave well. May I know what he said in this connection.

Sri C. M. ARUMUGAM.—I will have my say after the Chief Minister's statement.

Sri D. DEVARAJ URS.—There is nothing to have a say. You are unnecessarily getting touchy about certain matters.

Sri C. M. ARUMUGAM.—Every time Sri K. H. Patil is saying that we are threatening, he is suggesting indirectly that we are not

Sri D. DEVARAJ URS.—Why don't you have patience? You are a good debator. In a debate one must be sufficiently eloquent to retaliate. What is there to withdraw? Only when we go out of the way and use unparliamentary or abusive language or say anything that should not have been said or when the Speaker feels that certain things shoud not be said, certainly it should be withdrawn. Many a time we raise our voice when we talk and many a time while one Member has to get up, 10 Members get up. If somebody points out that you should not get up, these things need not be taken too seriously. He is a labour leader—and labour leaders do not get upset over such small things. A leader like Sri C. M. Arumugam should not get touchy or worried over it. He has got the power of his tongue and power of dialogue. He can deal with anybody in the manner be likes through his tongue and eloquence. That is always there. So, we can proceed with this.

ಶ್ರೀ ಎಸ್. ಬಂಗಾರಪ್ಪ.—ಈ ಸಭೆ ಮುಗಿಯುವುದರೊಳಗೆ ಆ ಪತ್ರವನ್ನು ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯ ಮುಂದೆ ಇಡುತ್ತಾರೆಯೇ?

ಅಧ್ಯಕ್ಷರು.—ನಾನು ಈಗಾಗಲೇ ಮುಂದಿನ ಪ್ರಶ್ನೆಯನ್ನು ಕರೆದಿದ್ದೇನೆ. ಆದ್ದರಿಂದ ಈಗ ತಮ್ಮ ಪ್ರಶ್ನೆ ಬರುವುದಿಲ್ಲ.

IMPROVEMENT OF SERVICE CONDITIONS OF PUBLIC PROSECUTORS.

259. Sri S. KARIYAPPA (Kanakapura).—

Will the Minister for Law and Parliamentary Affairs be pleased to state :—

(*a*) whether any representations have been made by Public Prosecutors regarding the improvement of their service conditions;